215 (286): ಶ್ರೀ ಕೃಷ್ಣ ಪಾಲೇಮಾರ್ ಜೆ (ಸೂರತ್ಕಲ್)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿ) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ದಕ್ಷಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಡಿಸಿಸಿ ಬ್ಯಾಂಕ್‌ನಿಂದ ಪಡೆದಿರುವ ದುಡಿಮೆ ಬಂಡವಾಳದ ಬದಲಾಗಿ ಸರ್ಕಾರವೇ ದುಡಿಯುವ ಬಂಡವಾಳವನ್ನು ಸಾಲ ರೂಪದಲ್ಲಿ ಕೊಡಲು ಮುಂದಾಗುವುದೆ;

ಆ. ಕೈಮಗ್ಗ ನೇಕಾರರ ಸಹಕಾರಿ ಸಂಘಗಳ ಲೆಕ್ಕ ಪರಿಶೋಧನೆಗೆ ಪ್ರಸ್ತುತ ವಿಧಿಸಲ್ಪಡುವ ಶುಲ್ಕವನ್ನು ವಿನಾಯಿತಿ ನೀಡಲು ಸರ್ಕಾರ ಕ್ರಮ ಜರುಗಿಸುವುದೇ;

ಇ. ಕೈಮಗ್ಗ ಗುಡಿ ಕೈಗಾರಿಕೆಗೆ ಬಳಸುವ ಕಚ್ಚಾ ಮಾಲುಗಳ ಮೇಲೆ ಮತ್ತು ಉತ್ಪನ್ನಗಳ ಮಾರಾಟದ ಮೇಲೆ ಸರ್ಕಾರ ಸಹಾಯಧನವನ್ನು ಸಕಾಲದಲ್ಲಿ ಘೋಷಿಸುವರೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿ)

ಅ. ಇಲ್ಲ.

ಆ. ಇಲ್ಲ.

ಇ. ಕಚ್ಚಾ ಮಾಲುಗಳ ಮೇಲೆ ಸಹಾಯಧನ ನೀಡುವ ಪ್ರಸ್ತಾವನೆ ಈ ಇಲಾಖೆಯಲ್ಲಿ ಇರುವುದಿಲ್ಲ. ಕೈಮಗ್ಗ ನೇಕಾರರ ಸಹಕಾರ ಸಂಘಗಳು ಮತ್ತು ಅಪೆಕ್ಸ್ ಸಂಸ್ಥೆಗಳು ಮಾಡುವ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ರಿಬೇಟ್ ನೀಡಲು 2006–07ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿಲಾಗಿದೆ.

216 (287): ಶ್ರೀ ಕೃಷ್ಣ ಪಾಲೇಮಾರ್.ಜೆ (ಸುರತ್ಕಲ್)

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಜವಳಿ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಸುರತ್ಕಲ್ ಕ್ಷೇತ್ರ ವ್ಯಾಪ್ತಿಯ ಎಷ್ಟು ಬೀಚ್‌ಗಳನ್ನು ಪ್ರವಾಸಿತಾಣಗಳೆಂದು ಸರ್ಕಾರ ಘೋಷಣೆ ಮಾಡಿದೆ ಮತ್ತು ಅಭಿವೃದ್ಧಿಪಡಿಸಿದೆ;

ಆ. ಪ್ರವಾಸಿಗರ ಆಕರ್ಷಣೀಯ ಕೇಂದ್ರವಾದ ಈ ಬೀಚ್‌ಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟು ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವಲ್ಲಿ ಸರ್ಕಾರದ ಕ್ರಮಗಳೇನು;